# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ಸಂ : ದೈ.ಶಿ.ವಿ./ 134 /2016-2017 ದಿನಾಂಕ : 28-06-2016

ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ
ಹಾಗೂ ನಿಯೋಜಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

*ಮಾನ್ಯರೆ,*

*ವಿಷಯ* : 2016-2017ನೇ ಸಾಲಿನ ಕ್ರೀಡಾ ಕಾರ್ಯಕ್ರಮಗಳನ್ನು ಯೋಜಿಸಲು
ಪ್ರತಿನಿಧಿಗಳ ಸಭೆ ನಡೆಸುವ ಬಗ್ಗೆ.

* * * * * *

ಮೈಸೂರು ವಿಶ್ವವಿದ್ಯಾನಿಲಯದ 2016-2017ನೇ ಸಾಲಿನ ಕ್ರೀಡಾ ಕಾರ್ಯಕ್ರಮಗಳನ್ನು ರೂಪಿಸಲು ಸಂಯೋಜಿತ ಹಾಗೂ ನಿಯೋಜಕ ಕಾಲೇಜುಗಳ ಪ್ರತಿನಿಧಿಗಳ ವಾರ್ಷಿಕ ಸಭೆಯನ್ನು ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ 20ನೇ ಜುಲೈ 2016ರಂದು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಹೊಸ ಕಟ್ಟಡದ ಸಭಾಂಗಣ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರಿನಲ್ಲಿ ಬೆಳಗ್ಗೆ 11-00 ಗಂಟೆಗೆ ಏರ್ಪಡಿಸಲಾಗಿದೆ. ಈ ಸಭೆಯಲ್ಲಿ ಪಾಲ್ಗೊಳ್ಳುವಂತೆ ತಮ್ಮ ಕಾಲೇಜಿನ ಪ್ರತಿನಿಧಿ (ದೈಹಿಕ ಶಿಕ್ಷಣ ಶಿಕ್ಷಕ : ಕ್ರೀಡಾ ಕಾರ್ಯದರ್ಶಿ) ಯವರಿಗೆ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ. ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯಗಳಿಗೆ ತಮ್ಮ ಒಪ್ಪಿಗೆಯನ್ನು ಸ್ಥಳದಲ್ಲಿಯೇ ಸೂಚಿಸುವ ಹೊಣೆಗಾರಿಕೆಯನ್ನು ತಮ್ಮ ಪ್ರತಿನಿಧಿಗಳಿಗೆ ನೀಡಬೇಕೆಂದು ವಿನಂತಿಸುತ್ತೇನೆ. ಸಭೆಗೆ ಹಾಜರಾಗುವ ಪ್ರತಿನಿಧಿಗಳ ಪ್ರಯಾಣ ಹಾಗೂ ದಿನಭತ್ಯೆಗಳನ್ನು ಆಯಾ ಕಾಲೇಜಿನ ಕ್ರೀಡಾ ನಿಧಿಯಿಂದಲೇ ಭರಿಸತಕ್ಕದ್ದು.

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಪ್ರತಿನಿಧಿಗಳನ್ನು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಸಭಾಂಗಣದಲ್ಲಿ ದಿನಾಂಕ : 20-07-2016ರ ಪೂರ್ವಾಹ್ನ 10-30ಕ್ಕೆ ಹಾಜರಿರುವಂತೆ ಸೂಚಿಸಬೇಕೆಂದೂ ಹಾಗೂ ವಿಶ್ವವಿದ್ಯಾನಿಲಯದ ಕ್ರೀಡಾ ಕಾರ್ಯಕ್ರಮಕ್ಕೆ ತಮ್ಮ ಸಂಪೂರ್ಣ ಸಹಕಾರವನ್ನು ನೀಡಬೇಕೆಂದು ಕೋರುತ್ತೇನೆ.

**ವಿಶೇಷ ಸೂಚನೆ**

ಅ) ಸಭೆಯಲ್ಲಿ ಮಂಡಿಸಲು ವಿಶ್ವವಿದ್ಯಾನಿಲಯ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಪಟ್ಟ ಸಲಹೆ : ಸೂಚನೆಗಳೇನಾದರೂ ಇದ್ದಲ್ಲಿ ಅವುಗಳನ್ನು ದಿನಾಂಕ : 13-07-2016ರೊಳಗೆ ತಲುಪಿಸತಕ್ಕದ್ದು.

ಆ) ಮಹಿಳೆಯರ/ಪುರುಷರ ಅಂತರ ವಲಯ ಕ್ರೀಡಾ ಸ್ಪರ್ಧೆಗಳು, ಅಥ್ಲೆಟಿಕ್ಸ್ ಕೂಟ ಮತ್ತು ಕ್ರಾಸ್‌ಕಂಟ್ರಿ ರೇಸ್‌ಗಳನ್ನು ನಡೆಸಲಿಚ್ಛಿಸುವ ಕಾಲೇಜುಗಳು ದಿನಾಂಕ : 13-07-2016ರೊಳಗೆ ತಮ್ಮ ಪ್ರಸ್ತಾಪನೆಗಳನ್ನು ಕಳುಹಿಸಿಕೊಡಬೇಕು.

ಇ) ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರೀಡಾಪಟುಗಳ ಗುಣಮಟ್ಟದ ವರ್ಧನೆ ಯೋಜನೆಯ ತರಬೇತಿ ಶಿಬಿರವನ್ನು 2016-17ನೇ ಸಾಲಿನಲ್ಲಿ ನಡೆಸಲಿಚ್ಛಿಸುವ ಕಾಲೇಜುಗಳು ಕಾಲೇಜಿನ ಪ್ರಾಂಶುಪಾಲರ ಮೂಲಕ ಕಾಲೇಜಿನಲ್ಲಿರುವ ಕ್ರೀಡಾ ಸೌಲಭ್ಯಗಳ ವಿವರಗಳನ್ನೊಳಗೊಂಡ ಪ್ರಸ್ತಾವನೆಗಳನ್ನು ದಿನಾಂಕ : 13-07-2016ರೊಳಗೆ ನಿರ್ದೇಶಕರಿಗೆ ತಲುಪಿಸತಕ್ಕದ್ದು.

ತಮ್ಮ ವಿಶ್ವಾಸಿ

28/6/2016

ನಿರ್ದೇಶಕರು

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ, ಪ್ರ.ತ.ನೋ.
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

**ಕಾರ್ಯ ಸೂಚಿ**

I ಬೆಳಿಗ್ಗೆ 10–30ಕ್ಕೆ ಟೀ

II ಬೆಳಿಗ್ಗೆ 10–50ಕ್ಕೆ ಸಭೆ ಸೇರುವುದು.

III ಸ್ವಾಗತ

IV ವಿವಿಧ ಕಾಲೇಜುಗಳು ಸಲ್ಲಿಸಿರುವ ಸಲಹೆ : ಸೂಚನೆಗಳ ಅನುಮೋದನೆ.

V ವಲಯ ಸಮಿತಿಗಳ ರಚನೆ.

VI ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರೀಡಾಪಟುಗಳ ಗುಣಮಟ್ಟದ ವರ್ಧನೆ ಯೋಜನೆಯ ವಿವಿಧ ವಲಯಗಳ ನೋಡಲ್ ಸೆಂಟರ್‌ಗಳ ಆಯ್ಕೆ ಮತ್ತು ತರಬೇತಿ ಪ್ರಾರಂಭಿಸುವ ದಿನಾಂಕವನ್ನು ನಿಗದಿಪಡಿಸುವುದು.

VII 2016–2017ನೇ ಸಾಲಿನ ಅಂತರ ವಲಯ ಸ್ಪರ್ಧೆಗಳ ಮತ್ತು ವಿಶ್ವವಿದ್ಯಾನಿಲಯದ ತಂಡಗಳ ಆಯ್ಕೆಗಾಗಿ ಸ್ಥಳ ಹಾಗೂ ದಿನಾಂಕಗಳನ್ನು ಗೊತ್ತುಪಡಿಸುವುದು.

VIII ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.

IX ಅಧ್ಯಕ್ಷರ ಭಾಷಣ

X ವಂದನಾರ್ಪಣೆ

20/6/2016

ನಿರ್ದೇಶಕರು

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು–570 005

ಸಂಪಾದಕರು/ವರದಿಗಾರರು/ನಿರ್ದೇಶಕರು.................................ಪತ್ರಿಕೆ/ಮಾಧ್ಯಮ ಮೈಸೂರು ಇವರು ಕೃಪೆಗಾಗಿ

ಭಾ.ಸ.ಸೇ.
O.I.G.S.

ತೆರೆದ ಅಂಚೆ
Book-Post

ಗೆ,

ಇಂದ,
ರವಾನೆ ಗುಮಾಸ್ತ
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಸ್ಪೋರ್ಟ್ಸ್ ಪೆವಿಲಿಯನ್
ಮೈಸೂರು–570 005

UPC-No 91-92

ಮೈಸೂರು ವಿಶ್ವವಿದ್ಯಾನಿಲಯ
ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು

# ಅರ್ಜಿ ನಮೂನೆ

**2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರೀಡಾಪಟುಗಳ ಗುಣಮಟ್ಟ ವರ್ಧನೆ ಯೋಜನೆ ಅಡಿಯಲ್ಲಿ ನಡೆಸಲಿಚ್ಛಿಸುವ ಕ್ರೀಡಾಚಟುವಟಿಕೆಗಾಗಿ ಅರ್ಜಿ:**

| | | |
|---|---|---|
| 1. | ನೋಡಲ್ ಸೆಂಟರ್ ನಡೆಸಲಿಚ್ಛಿಸುವ ಕಾಲೇಜಿನ ಹೆಸರು ಮತ್ತು ವಿಳಾಸ | |
| 2. | ನಿಮ್ಮ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? | 1. ಪುರುಷರು :<br>2. ಮಹಿಳೆಯರು: |
| 3. | ನಡೆಸಲಿಚ್ಛಿಸುವ ಚಟುವಟಿಕೆ (Activity) | |
| 4. | ನೋಡಲ್ ಸೆಂಟರ್ ನಡೆಸುವ ದೈಹಿಕ ಶಿಕ್ಷಣ ನಿರ್ದೇಶಕರ ಹೆಸರು ಮತ್ತು ಮೋಬೈಲ್ ಸಂಖ್ಯೆ: | |
| 5. | ಕಾಲೇಜಿನಲ್ಲಿ ಲಭ್ಯವಿರುವ ಕ್ರೀಡಾ ಸೌಲಭ್ಯಗಳ ಬಗ್ಗೆ ಮಾಹಿತಿ. ಉದಾ: ಒಳಾಂಗಣ, ಹೊರಾಂಗಣ ಕ್ರೀಡಾ ಮೈದಾನಗಳು | |
| 6. | ಇಲ್ಲಿಯವರೆಗೆ ಎಷ್ಟು ಬಾರಿ ತಮ್ಮ ಕಾಲೇಜಿನ ಈ ಯೋಜನೆಯನ್ನು ವತಿಯಿಂದ ಚಟುವಟಿಕೆಯನ್ನು ನಡೆಸಿದ್ದೀರಿ ಮತ್ತು ಯಾವ ಯಾವ ಚಟುವಟಿಕೆಗಳನ್ನು ನಡೆಸಿದ್ದೀರಿ | |
| 7. | ಈ ಯೋಜನೆಯಿಂದ ನಿಮ್ಮ ಕಾಲೇಜಿನ ಎಷ್ಟು ವಿದ್ಯಾರ್ಥಿಗಳು ಯಾವ ಯಾವ ಕ್ರೀಡೆಗಳಲ್ಲಿ, ಯಾವ ಯಾವ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿವ ಬಗ್ಗೆ ಮಾಹಿತಿ: | |
| 8. | ಈ ಯೋಜನೆಯನ್ನು ನಡೆಸಲು ಏಕೆ ಇಷ್ಟಪಡುತ್ತೀರಿ? | |
| 9. | ನಿಮ್ಮ ಕಾಲೇಜಿನ ವಿದ್ಯಾರ್ಥಿಗಳು ಯಾವ ಯಾವ ಕ್ರೀಡೆಗಳಲ್ಲಿ ಆಸಕ್ತರಾಗಿದ್ದಾರೆ. | |

ದಿನಾಂಕ:

ಪ್ರಾಂಶುಪಾಲರ ಸಹಿ